# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಸರೋಜಿನಿ ಗಂಡ ಶಿವಶರಣಪ್ಪಾ ಘಂಟಿ, ಅಧ್ಯಕ್ಷರು, ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ರವರ ಪತ್ರ ಸಂಖ್ಯೆ: ರಾಚುಆ 03 ಇಜಿಪಿ 2016, ದಿನಾಂಕ: 06.09.2015.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಲಬುರಗಿ ಜಿಲ್ಲಾ ಪಂಚಾಯಿತಿ ರವರ ಪತ್ರ ಸಂಖ್ಯೆ:ಜಿಪಕ/ಪಶಾ/ಗ್ರಾಪಂ/98/2016-17/738, ದಿನಾಂಕ:24.10.2016
3. ತಹಶೀಲ್ದಾರ ಗ್ರೇಡ್-2, ಚಿಂಚೋಳಿ ರವರ ಆದೇಶ ಸಂಖ್ಯೆ: ಕಂ/ಸಂಕೀರ್ಣ-1/330/2015-16, ದಿನಾಂಕ:28.06.2016.
4. ಜಿಲ್ಲಾದಿಕಾರಿಗಳು, ಕಲಬುರಗಿ ರವರ ಪತ್ರ ಸಂಖ್ಯೆ: ಕಂ/ಗ್ರಾಪಂ/65/2015-16/7589. ದಿನಾಂಕ:19.11.2016.
5. ಸರ್ಕಾರದ ಸಮಸಂಖ್ಯೆಯ ಕಾರಣ ಕೇಳುವ ನೋಟೀಸ್ ದಿನಾಂಕ:-11-11-2016

**ಪ್ರಸ್ತಾವನೆ :**

ಮೇಲೆ ಓದಲಾದ (1) ರಲ್ಲಿ ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ರವರು ಶ್ರೀಮತಿ ಸರೋಜಿನಿ ಗಂಡ ಶಿವಶರಣಪ್ಪಾ ಘಂಟಿ, ಅಧ್ಯಕ್ಷರು, ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ತಪ್ಪು ಮಾಹಿತಿ ನೀಡಿ ವೀರಶೈವ ಲಿಂಗಾಯತ ಜಾತಿ ಪ್ರಮಾಣ ಪತ್ರ ಪಡೆದಿರುವುದನ್ನು ತಹಶೀಲ್ದಾರರು, ಚಿಂಚೋಳಿ, ಕಲಬುರಗಿ ಜಿಲ್ಲೆ ಇವರು ಮೇಲೆ ಓದಲಾದ (3) ರಲ್ಲಿ ಹಿಂಪಡೆದು ಆದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಲಬುರಗಿ ಜಿಲ್ಲಾ ಪಂಚಾಯತಿ ರವರು ಸಹ ಸದರಿಯವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಅಧ್ಯಕ್ಷರಾಗಿರುವುದು ದೃಢಪಟ್ಟಿರುವುದು ಸಾಬೀತಾಗಿರುವುದರಿಂದ, ತಹಶೀಲ್ದಾರರು, ಚಿಂಚೋಳಿ, ಕಲಬುರಗಿ ಜಿಲ್ಲೆ ಇವರು ಮೇಲೆ ಓದಲಾದ (3) ರಲ್ಲಿ ಆದೇಶದ ಮೂಲಕ ಸದರಿಯವರಿಗೆ ನೀಡಿರುವ ಆದೇಶವನ್ನು ಮರಳಿ ಪಡೆದಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಕೈಗೊಳ್ಳುವ ಸಲುವಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ಮೇಲೆ ಓದಲಾದ (4) ರಲ್ಲಿ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, 2015 ರ ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆಯಲ್ಲಿ ಸದರಿಯವರು 3-ಸುಲೇಪೇಟ ಪ್ರಾದೇಶಿಕ ಕ್ಷೇತ್ರಕ್ಕೆ ಮೀಸಲಿರಿಸಲಾದ ಸಾಮಾನ್ಯ (ಮಹಿಳೆ) ಸದಸ್ಯ ಸ್ಥಾನದಿಂದ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆ ಹೊಂದಿದ್ದು, ತದನಂತರ ಈ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನವು ಹಿಂದುಳಿದ ವರ್ಗ (ಬ) ಕ್ಕೆ ಮೀಸಲಿರಿಸಿ ತಮ್ಮ ಕಾರ್ಯಾಲಯದಿಂದ ದಿನಾಂಕ 17.06.2015 ರಂದು ಆದೇಶ ಹೊರಡಿಸಲಾಗಿತ್ತೆಂದು, ಸದರಿ ಹಿಂದುಳಿದ ವರ್ಗ (ಬ) ಕ್ಕೆ ಮೀಸಲಿರಿಸಿದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವ ದುರುದ್ದೇಶದಿಂದ, ಸದರಿಯವರು ಸುಳ್ಳು ಮಾಹಿತಿ ಹಾಗೂ ಸುಳ್ಳು ಶಪತ ಪತ್ರವನ್ನು ಸಲ್ಲಿಸಿ ತಹಶೀಲ್ದಾರ ಗ್ರೇಡ್-2, ಚಿಂಚೋಳಿ ರವರಿಂದ ಹಿಂದುಳಿದ (ಬ) ವರ್ಗ ಪ್ರಮಾಣ ಪತ್ರವನ್ನು ಪಡೆದು ವಾಮ ಮಾರ್ಗ ಮುಖಾಂತರ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಿರುತ್ತಾರೆ. ತದನಂತರ ತಹಶೀಲ್ದಾರ ಗ್ರೇಡ್-2, ಚಿಂಚೋಳಿ ರವರು, ಸದರಿಯವರ ಜಾತಿ ಪ್ರಮಾಣ ಪತ್ರವನ್ನು ಮರುಪರಿಶೀಲಿಸಿ, ಸದರಿಯವರಿಗೆ ನೀಡಿದ ಜಾತಿ ಪ್ರಮಾಣ ಪತ್ರವನ್ನು ಮರಳಿ ಪಡೆದು ಆದೇಶಿಸಿರುವ ಹಿನ್ನೆಲೆಯಲ್ಲಿ ಸುಲೇಪೇಟ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನವು ತೆರವಾಗಿರುವುದೆಂದು ಭಾವಿಸಿ ಅಧ್ಯಕ್ಷ ಸ್ಥಾನದ ಚುನಾವಣೆ ಜರುಗಿಸಲು ಸೂಕ್ತ ಆದೇಶ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (5) ರಲ್ಲಿ ಶ್ರೀಮತಿ ಸರೋಜಿನಿ ಗಂಡ ಶಿವಶರಣಪ್ಪಾ ಘಂಟಿ, ಅಧ್ಯಕ್ಷರು ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರಿಗೆ ಈ ಸಂಬಂಧ ಕಾರಣ ಕೇಳುವ ನೋಟೋಸ್‌ನ್ನು ದಿನಾಂಕ 11-11-2016 ರಂದು ಜಾರಿಗೊಳಿಸಲಾಗಿದ್ದು, ಈ ಸಂಬಂಧ ಸದರಿಯವರಿಂದ ಯಾವುದೇ ಆಕ್ಷೇಪಣೆಗಳು ಕಾಲಮಿತಿಯಲ್ಲಿ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಶ್ರೀಮತಿ ಸರೋಜಿನಿ ಗಂಡ ಶಿವಶರಣಪ್ಪಾ ಘಂಟಿ, ಅಧ್ಯಕ್ಷರು ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿರುವುದರಿಂದ, ಸದರಿಯವರು ದುರ್ನಡತೆ ಅಥವಾ ತಲೆ ತಗ್ಗಿಸುವಂಥ ನಡತೆಯ ತಪ್ಪಿತಸ್ಥರಾಗಿದ್ದಾರೆಂದು ಕಂಡು ಬಂದಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/473/ಗ್ರಾಪಂಕಾ/2016**
**ಬೆಂಗಳೂರು, ದಿನಾಂಕ:-27-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಸರೋಜಿನಿ ಗಂಡ ಶಿವಶರಣಪ್ಪಾ ಘಂಟಿ, ಅಧ್ಯಕ್ಷರು, ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಸುಲೇಪೇಟ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಪಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:-**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕಲಬುರಗಿ ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
2. ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ.
3. ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್‌ಹ್ಯಾಂ, ರಸ್ತೆ, ಬೆಂಗಳೂರು-52.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿಂಚೋಳಿ, ಕಲಬುರಗಿ ಜಿಲ್ಲೆ.
5. ಶ್ರೀಮತಿ ಸರೋಜಿನಿ ಗಂಡ ಶಿವಶರಣಪ್ಪಾ ಘಂಟಿ, ಅಧ್ಯಕ್ಷರು ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.
6. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸುಲೇಪೇಟ ಗ್ರಾಮ ಪಂಚಾಯಿತಿ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.